ಕಾಪಿ ಮಾಡುವ ವಿದ್ಯಾರ್ಥಿಗಳಿಗೆ ಕುಮ್ಮಕ್ಕು ನೀಡುವವರ ವಿರುದ್ಧ ಕ್ರಮ

784 - ಶ್ರೀ ವೈ.ರಾಮಕೃಷ್ಣ (ಆನೇಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರೀಕ್ಷೆಗಳಲ್ಲಿ ಕಾಪಿ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಶಾಲಾ ಕಾಲೇಜುಗಳನ್ನು ಸರ್ಕಾರದವರು ಗುರುತಿಸಿದ್ದಾರೆಯೇ?

ಆ) ಹಾಗೇ ಗುರುತಿಸಿದ್ದರೆ ಜಿಲ್ಲಾವಾರು ವಿವರ ಲಗತ್ತಿಸಲಾಗಿದೆ.

ಇ) ಈ ರೀತಿ ಅವ್ಯವಹಾರ ನಡೆಸುತ್ತಿರುವವರ ಮೇಲೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 387 ಎಸ್.ಎಸ್.ಎಲ್.ಸಿ ಪರೀಕ್ಷೆ ಕೇಂದ್ರಗಳನ್ನು ಮತ್ತು 46 ಪದವಿ ಪೂರ್ವ ಪರೀಕ್ಷಾ ಕೇಂದ್ರಗಳನ್ನು ಸೂಕ್ಷ್ಮ ಕೇಂದ್ರಗಳೆಂದು ಗುರುತಿಸಲಾಗಿದೆ.

ಆ) ಜಿಲ್ಲಾವಾರು ಮಾಹಿತಿ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಅಂತಹ ಪರೀಕ್ಷಾ ಕೇಂದ್ರಗಳನ್ನು ರದ್ದುಪಡಿಸಿ ಅಲ್ಲಿ ಮುಖ್ಯಅಧೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದವರನ್ನು ಪರೀಕ್ಷಾ ಕೆಲಸದಿಂದ ಉಚ್ಚಾಟಿಸಲಾಗಿದೆ. ಅನಿವಾರ್ಯ ಪ್ರಸಂಗಗಳಲ್ಲಿ ರದ್ದುಪಡಿಸಿದ್ದ ಕೇಂದ್ರವನ್ನು ಮುಂದುವರೆಸಿದಲ್ಲಿ ಸದರಿ ಕೇಂದ್ರಕ್ಕೆ ಸರ್ಕಾರಿ ಶಾಲೆಯ ಶಿಕ್ಷಕರು/ ಇಲಾಖಾ ಅಧಿಕಾರಿಗಳನ್ನು ಮುಖ್ಯ ಅಧೀಕ್ಷಕರನ್ನಾಗಿ, ಅಭಿರಕ್ಷಕರನ್ನಾಗಿ ನೇಮಿಸಲಾಗುತ್ತದೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1051 ಶ್ರೀ ವೈ. ರಾಮಕೃಷ್ಣ ರವರ ಪ್ರಶ್ನೆಗೆ ಜಿಲ್ಲಾವಾರು ಮಾಹಿತಿ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರ	ಪಿಯುಸಿ ಪರೀಕ್ಷಾ ಕೇಂದ್ರ
1.	ಬೆಂಗಳೂರು ನಗರ	36	-
2.	ಬೆಂಗಳೂರು ಗ್ರಾಮಾಂತರ	23	-
3.	ಬಳ್ಳಾರಿ	14	-
4.	ಬಿಜಾಪುರ	32	7
5.	ಬೆಳಗಾಂ	41	7
6.	ಬೀದರ್	14	4
7.	ಚಿತ್ರದುರ್ಗ	44	3
8.	ಚಿಕ್ಕಮಗಳೂರು	9	1
9.	ಧಾರವಾಡ	25	5
10.	ದಕ್ಷಿಣ ಕನ್ನಡ	6	-
11.	ಗುಲ್ಬರ್ಗಾ	19	3
12.	ಹಾಸನ	12	1
13.	ಕೋಲಾರ	11	1
14.	ಕೊಡಗು	-	-
15.	ಮೈಸೂರು	17	3
16.	ಮಂಡ್ಯ	27	-
17.	ರಾಯಚೂರು	10	-
18.	ಶಿವಮೊಗ್ಗ	14	-
19.	ತುಮಕೂರು	26	11
20.	ಉತ್ತರ ಕನ್ನಡ	7	-
	ಒಟ್ಟು	**387**	**46**